ಬಿ.ಆರ್. ಲಕ್ಷ್ಮಣರಾವ್

# ನಿಚ್ಚಂ ಪೊಸತು




**ನಶಿಸಿಹೋಗುವುದೇ** ಕನ್ನಡಭಾಷೆ?
ಇಲ್ಲ, ಅದು ಸುಳ್ಳು.
ಎಷ್ಟೇ ತುಳಿದರೂ ಎದ್ದು ನಿಲ್ಲುವುದು
ಕನ್ನಡ, ಗರಿಕೆಹುಲ್ಲು.

ಕೊಲ್ಲಲು ಬಂದ ಅನ್ಯಭಾಷೆಗಳ
ವಾತಾಪಿಗಳನು ಉಂಡು,
ಬೆಳೆದಿದೆ ಕನ್ನಡ ಅಗಸ್ತ್ಯನಂತೆ
ಎಲ್ಲವ ಜೀರ್ಣಿಸಿಕೊಂಡು.

ಲಾಭನಷ್ಟಗಳ ವ್ಯವಹಾರವಲ್ಲ
ಕನ್ನಡನಾಡು, ನುಡಿ.
ನಮಗೆ ನಮ್ಮದೇ ಚಹರೆಯ ತೋರುವ
ಪರಂಪರಾಗತ ಕನ್ನಡಿ.

ಕನ್ನಡವೆಂಬುದು ಅಮ್ಮನ ಮಮತೆ
ಕನ್ನಡ ಹೃದಯಗಳಲ್ಲಿ.
ಜಗದ ಎಲ್ಲೆಡೆಗು ಹಬ್ಬಿದೆ ಇಂದು
ಕನ್ನಡದ ಕರುಳಬಳ್ಳಿ.

ಪ್ರತಿ ಋತುಮಾನಕು ಬದಲಾಗುವಂತೆ
ನಿತ್ಯನೂತನೆ ಧರಿತ್ರಿ,
ಪಂಪ ನುಡಿದಂತೆ 'ನಿಚ್ಚಂ ಪೊಸತು'
ನಮ್ಮ ಕನ್ನಡನುಡಿ.